# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 27/02/2020

# ಬಾಡಿಗೆ ತಾಯ್ತನ ವಿಧೇಯಕಕ್ಕೆ ಅಸ್ತು

**ನವದೆಹಲಿ:** ಬಾಡಿಗೆ ತಾಯಿಯಾಗಲು ಇಚ್ಛಿಸುವ ಯಾವುದೇ ಮಹಿಳೆಗೂ ಅಂಥ ಅವಕಾಶವನ್ನು ಕಲ್ಪಿಸುವ ಮತ್ತು ವಿಧವೆಯರು ಹಾಗೂ ವಿಚ್ಛೇದಿತ ಮಹಿಳೆಯರು ಕೂಡ ಬಾಡಿಗೆ ತಾಯ್ತನದ ಮೂಲಕ ಮಕ್ಕಳನ್ನು ಪಡೆಯಲು ಅವಕಾಶ ನೀಡುವಂಥ ಬಾಡಿಗೆ ತಾಯ್ತನ ವಿಧೇಯಕ 2020ಕ್ಕೆ ಕೇಂದ್ರ ಸಂಪುಟದ ಒಪ್ಪಿಗೆ ಸಿಕ್ಕಿದೆ.

ಬುಧವಾರ ಪ್ರಧಾನಿ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಂಪುಟ ಸಭೆಯಲ್ಲಿ ಈ ವಿಧೇಯಕ ಅಂಗೀಕಾರವಾಗಿದೆ. ರಾಜ್ಯಸಭೆಯ ಆಯ್ಕೆ ಸಮಿತಿ ಶಿಫಾರಸು ಮಾಡಿರುವ ಎಲ್ಲ ಅಂಶಗಳನ್ನೂ ಈ ವಿಧೇಯಕ ಒಳಗೊಂಡಿದೆ. ಶಿಫಾರಸಿನಂತೆಯೇ, ವಾಣಿಜ್ಯಿಕ ಬಾಡಿಗೆ ತಾಯ್ತನಕ್ಕೆ ನಿಷೇಧ ಹೇರಲಾಗಿದೆ ಎಂದು ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.

ಭಾರತೀಯ ದಂಪತಿಗಳು(ಪತಿ-ಪತ್ನಿ ಇಬ್ಬರೂ ಭಾರತ ಮೂಲದವರಾಗಿದ್ದರೆ) ದೇಶದಲ್ಲಿ ಬಾಡಿಗೆ ತಾಯ್ತನದ ಮೂಲಕ ಮಕ್ಕಳನ್ನು ಪಡೆಯಬಹುದು ಎಂದೂ ವಿಧೇಯಕದಲ್ಲಿದೆ. ಇದೇ ವೇಳೆ, 1,480 ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ತಾಂತ್ರಿಕ ಜವಳಿ ಮಿಷನ್ ರಚನೆಗೂ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ. ನಾಲ್ಕು ವರ್ಷಗಳೊಳಗಾಗಿ ಇದು ಜಾರಿಯಾಗಲಿದೆ.